**ಪಾಠ-11** **ಸೆಪ್ಟೆಂಬರ್ 4-10**

# ಹೆಚ್ಚಿನದಕ್ಕಾಗಿ ಹಾತೊರೆಯುವುದು



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಅಧ್ಯಯನಕ್ಕಾಗಿ ಓದಿರಿ :** 1 ಕೊರಿಂಥ 10:1–11, ಯಾ.ಕಾಂಡ 4:32–35, ಯೋಹಾನ 1:29, ಇಬ್ರಿಯ 4:1–11, ಕೀರ್ತ 95:8–11.

**ಸ್ಮರಣವಾಕ್ಯ : "ಅವರು ಕೆಟ್ಟ ವಿಷಯಗಳನ್ನು ಆಶಿಸಿದಂತೆ ನಾವು ಆಶಿಸುವವರಾಗ–ಬಾರದೆಂಬುದಕ್ಕಾಗಿ ಈ ಸಂಗತಿಗಳು ನಮಗೆ ನಿದರ್ಶನಗಳಾಗಿವೆ** (1 ಕೊರಿಂಥ 10:6).

ಅಮೇರಿಕ ಸಂಯುಕ್ತ ಸಂಸ್ಥಾನದ, ನ್ಯೂಯಾರ್ಕ್‌ನಗರದಲ್ಲಿರುವ ಕ್ವೀನ್ ಮ್ಯೂಸಿಯಂ ಆಫ್ ಆರ್ಟ್ಸ್ ವಸ್ತುಸಂಗ್ರಹಾಲಯವು ಪ್ರಪಂಚದಲ್ಲೇ ದೊಡ್ಡದೆನಿಸಿ–ಕೊಂಡಿರುವ "ನ್ಯೂಯಾರ್ಕ್ ನಗರದ ವಾಸ್ತುಶಿಲ್ಪದ ಮಾದರಿ"ಯನ್ನು ಹೊಂದಿದೆ. ಈ ವಾಸ್ತುಶಿಲ್ಪದ ಮಾದರಿಯಲ್ಲಿ ನ್ಯೂಯಾರ್ಕ್‌ನಲ್ಲಿರುವ ಎಲ್ಲಾ ಕಟ್ಟಡಗಳೂ ಚಿತ್ರಿತವಾಗಿವೆ. ಈ ಮಾದರಿಯ ಪ್ರಮಾಣವು 1:1,200 ಅನುಪಾತದಲ್ಲಿದೆ ಅಂದರೆ ಪ್ರತಿ 1 ಇಂಚು ನೂರು ಅಡಿಗಳಿಗೆ ಸಮವಾಗುತ್ತದೆ. ಇದು ಸುಮಾರು 870 ಚದರ ಮೀಟರ್ ಜಾಗವನ್ನು ಹಿಡಿದುಕೊಂಡಿದೆ. ಇದನ್ನು ಸುಮಾರು 100 ಜನ ಶಿಲ್ಪಿಗಳು ಸತತ ಮೂರು ವರ್ಷಗಳ ಕಾಲ ಸಿದ್ಧಪಡಿಸಿ 1964ರಲ್ಲಿ ಪೂರ್ಣಗೊಳಿಸಿದರು. ಇದನ್ನು 1990ನೆ ವರ್ಷದವರೆಗೂ ಪ್ರಸ್ತುತಪಡಿಸಲಾಗಿದೆ. ಆದರೆ 2021ನೇ ಇಸವಿಯಲ್ಲಿರುವ ನಗರವನ್ನು ಪ್ರತಿಬಿಂಬಿಸುವುದಿಲ್ಲ. ಇದು ಅತ್ಯಂತ ಒಂದು ಅತಿಸೂಕ್ಷ್ಮದ ಸವಿವರ ಹೊಂದಿದ ಮೂಲಕೃತಿಯ ನಕಲಾಗಿದೆ. ಕೊನೆಯಲ್ಲಿ ಹೇಳಬೇಕಾದುದು ಏನೆಂದರೆ ಇದು ಒಂದು ನಕಲು ಒಂದು ನಮೂನೆ, ಒಂದು ದೊಡ್ಡದಾದ, ಅದ್ಭೂರಿಯಾದ ಮೂಲಕೃತಿಯ ಪ್ರತಿಬಿಂಬವಾಗಿದೆ.

---

* **ಈ ವಾರದ ಪಾಠವನ್ನು ಸೆಪ್ಟೆಂಬರ್ 11ರ ಸಬ್ಬತ್ತಿಗೆ ಅಧ್ಯಯನ ಮಾಡಿ ಸಿದ್ಧಪಡಿಸಿಕೊಳ್ಳಿರಿ.**

ವಾಸ್ತವವಾಗಿ ಎಲ್ಲಾ ನಮೂನೆಗಳು ಹೀಗೆಯೇ ಇರುತ್ತವೆ. ಅವುಗಳು ಮೂಲಕೃತಿಗಳಲ್ಲದಿದ್ದರೂ ಅವುಗಳ ಸಂಕೇತಗಳಾಗಿ ಕಾರ್ಯನಿರ್ವಹಿಸುತ್ತವೆ. ಒಂದು ನಮೂನೆಯು ಮೂಲಕೃತಿಯ ಸಾರವನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತದೆಯೇ ಹೊರತು ಮೂಲಕೃತಿಗೆ ಬದಲಿಯಾಗಲಾರದು.

ಪರಿಶುದ್ಧ ಗ್ರಂಥದಲ್ಲಿ ಇಂತಹ ನಮೂನೆಗಳು ಬಹಳಷ್ಟಿವೆ. ಇವು ಪರಲೋಕದ ವಾಸ್ತವತೆಯನ್ನು ಪ್ರತಿಬಿಂಬಿಸುತ್ತವೆ. ಇಬ್ರಿಯ ನಾಲ್ಕನೇ ಅಧ್ಯಾಯವು ಈ ವಾಸ್ತವತೆಗಳಲ್ಲಿ ಒಂದನ್ನು ಕಂಡುಕೊಳ್ಳುವಂತೆ ಸಹಾಯ ಮಾಡುತ್ತದೆ. ಅದೇನೆಂದರೆ ಸತ್ಯವೇದ ಆಧಾರಿತ 'ವಿಶ್ರಾಂತಿ'.

**ಭಾನುವಾರ** **ಸೆಪ್ಟೆಂಬರ್ 5**

## ಮೋಶೆಯ ಶಿಷ್ಯರಾಗುವುದಕ್ಕೆ ದೀಕ್ಷಾಸ್ನಾನ ಪಡೆದರು

1 ಕೊರಿಂಥ 10:1–10 ವಚನಗಳನ್ನು ಓದಿರಿ. ಪೌಲನು ತನ್ನ ಓದುಗರಿಗೆ ಏನನ್ನು ತಿಳಿಸಲು 'ನಿದರ್ಶನ ರೂಪಗಳ' ಪ್ರಸ್ತಾಪ ಮಾಡಿದ್ದಾನೆ? 1 ಕೊರಿಂಥ 10:6ನೇ ವಚನದಲ್ಲಿ ಗ್ರೀಕ್ ಪದವು ಬಳಕೆಯಾಗಿದೆ (1 ಕೊರಿಂಥ 10:11 ರಲ್ಲೂ ಇದಕ್ಕೆ ಸಮನಾದ ರೂಪವಿದೆ). ಇಂಗ್ಲಿಷ್‌ನಲ್ಲಿ 'ಎಗ್ಸಾಂಪಲ್' ಎಂದು ಅನುವಾದ ಗೊಂಡಿರುವ 'ಅರೈಪೋಸ್' ಗ್ರೀಕ್‌ನಾಮ ಪದವು ಟೈಪ್ ಪದಕ್ಕೆ ಮೂಲವಾಗಿದೆ. ಒಂದು ಮಾದರಿ (ಅಥವಾ ಉದಾಹರಣೆ) ಎಂದಿಗೂ ಮೂಲವಸ್ತು ಎನಿಸಿಕೊಳ್ಳುವುದಿಲ್ಲ. ಆದರೆ ಅದು ಒಂದು ಬಗೆಯ ಸಂಕೇತವಾಗಿರುತ್ತದೆ. ಇಲ್ಲವೇ ಮೂಲಕೃತಿಯ ಪ್ರತಿನಿಧಿಯಾಗಿರುತ್ತದೆ.

ಇಬ್ರಿಯ 8:5 ಈ ವಿಧದ ಸಂಬಂಧಕ್ಕೆ ಒಳ್ಳೆಯ ಉದಾಹರಣೆಯನ್ನು ಒದಗಿಸುತ್ತದೆ. ಹಳೆಯ ಒಡಂಬಡಿಕೆಯ ಯಾಜಕರು ಪರಲೋಕದ ವಸ್ತುಗಳ ಮಾದರಿ ಅಥವಾ ಛಾಯಗಳನ್ನು ಸೇವಿಸುತ್ತಿದ್ದರು. ದೇವರು ಮೋಶೆಗೆ "ನಾನು ನಿನಗೆ ತೋರಿಸುವ ಮಾದರಿಯ ಪ್ರಕಾರವೇ ಗುಡಾರವನ್ನೂ ಅದರಲ್ಲಿರುವ ಎಲ್ಲಾ ಸಾಮಾನುಗಳನ್ನು ಮಾಡಿಸಬೇಕು (ವಿ.ಕಾಂಡ 25:9) ಎಂದು ಹೇಳಿದನು.

ಇಬ್ರಿಯ ಪುಸ್ತಕದ ಈ ವಚನಗಳು ಪರಲೋಕದ ಮತ್ತು ಭೂಲೋಕದ ವಾಸ್ತವವಗಳ ನಡುವೆ ಇರುವ ಸಂಬಂಧವನ್ನು ಎತ್ತಿ ತೋರಿಸುತ್ತದೆ. ನಂತರ

ವಿಮೋಚನಾಕಾಂಡ 25:9ನ್ನು ಉಲ್ಲೇಖವಿದೆ. "ಬೆಟ್ಟದಲ್ಲಿ ನಾನು ನಿನಗೆ ತೋರಿಸಿದ ಮಾದರಿಯ ಪ್ರಕಾರವೇ ಎಲ್ಲವನ್ನೂ ಮಾಡಿಸಬೇಕು" ಎಂಬ ದೈವೋಕ್ತಿ ಮೋಶೆಗೆ ಉಂಟಾಯಿತು ಎಂದು ತಿಳಿಸುತ್ತದೆ. ಇಲ್ಲಿ ತಿಳಿದುಕೊಳ್ಳಬೇಕಾದ ವಿಷಯವೇನೆಂದರೆ ದೇವದರ್ಶನ ಗುಡಾರದಲ್ಲಿ ನಡೆಯುತ್ತಿದ್ದ ಎಲ್ಲಾ ಧಾರ್ಮಿಕ ಸಂಸ್ಕಾರಗಳು ಮತ್ತು ಕ್ರಮಗಳು ಪರಲೋಕದ ಗುಡಾರ ಸೇವೆಗೆ ಕೇವಲ ಸಂಕೇತಗಳು, ಗುರುತುಗಳು ಮತ್ತು ಮಾದರಿಗಳಾಗಿದ್ದವು. ಅಲ್ಲಿ ಕ್ರಿಸ್ತನು ನಮಗೆ ಮಹಾಯಾಜಕನಾಗಿದ್ದಾನೆ.

ಇದನ್ನು ಮನಸ್ಸಿನಲ್ಲಿಟ್ಟುಕೊಂಡರೆ ಪೌಲನು 1 ಕೊರಿಂಥ 10ರಲ್ಲಿ ಯಾವುದರ ಬಗ್ಗೆ ಮಾತಾಡುತ್ತಿದ್ದಾನೆಂಬುದನ್ನೂ ಇನ್ನೂ ಚೆನ್ನಾಗಿ ಅರ್ಥಮಾಡಿಕೊಳ್ಳಬಹುದು. ಈ ವಚನಗಳಲ್ಲಿ ಪೌಲನು ವಾಗ್ದಾನ ದೇಶಕ್ಕೆ ಪ್ರಯಾಣಿಸುವಾಗ ದೇವಜನರು ಅಡವಿಯಲ್ಲಿ ಹೊಂದಿದ ಕೆಲವು ಮುಖ್ಯ ಅನುಭವಗಳನ್ನು ಮತ್ತೆ ಉಲ್ಲೇಖಿಸುತ್ತಾನೆ.

ನಮ್ಮ ಪಿತೃಗಳು ಎಂಬುದು ಯೆಹೂದ್ಯರ ಪೂರ್ವಿಕರನ್ನು, ಕುರಿತು ಹೇಳುತ್ತದೆ. ಅವರು ಐಗುಪ್ತದೇಶವನ್ನು ಬಿಟ್ಟು ಸಮುದ್ರವನ್ನು ದಾಟಿ ಮೇಘದ ಅಡಿಯಲ್ಲೇ ಪ್ರಯಾಣ ಮಾಡಿದರು. ಅವರೆಲ್ಲರೂ ದಾಸತ್ವದಿಂದ ಬಿಡುಗಡೆ ಹೊಂದಿದ ಹೊಸ ಜಿವನಕ್ಕೆ ದೀಕ್ಷಾಸ್ನಾನ ಹೊಂದಿದರು. ಪೌಲನು ಈ ಮುಖ್ಯವಾದ ಘಟನೆಗಳನ್ನು ನಿದರ್ಶನ ರೂಪ ಎಂದು ಪರಿಗಣಿಸುತ್ತಾನೆ. ಇದು ಅಡವಿಯ ಪ್ರಯಾಣದಲ್ಲಿ ವ್ಯಕ್ತಿಗತವಾಗಿ ಹೊಂದಿಕೊಂಡ ದೀಕ್ಷಾಸ್ನಾನವಾಗಿದೆ. ಪೌಲನ ತರ್ಕಾನುಸಾರವಾಗಿ ಮನ್ನವನ್ನು ಆತ್ಮೀಕ ಆಹಾರವಾಗಿ ಪರಿಗಣಿಸಬಹುದು (ವಿ.ಕಾಂಡ 16:31–35 ವಚನಗಳಿಗೆ ಹೋಲಿಸಿರಿ). ಇಸ್ರಾಯೇಲ್ಯರು ಬಂಡೆಯಿಂದ ಕುಡಿದರು. ಬಂಡೆಯು ಕ್ರಿಸ್ತನೇ ಎಂಬುದಾಗಿ ಪೌಲನು ಗುರುತಿಸುತ್ತಾನೆ (1 ಕೊರಿಂಥ 10:4). ಜೀವಕೊಡುವ ರೊಟ್ಟಿಯಾಗಿ (ಯೋಹಾನ 6:48) ಮತ್ತು ಜೀವಜಲವಾಗಿ (ಯೋಹಾನ 4:10) ಯೇಸುಕ್ರಿಸ್ತನನ್ನು ಆಲೋಚಿಸಿರಿ ಇದು ತಾನೆ ಪರಿಪೂರ್ಣವಾದ ಅರ್ಥವನ್ನು ಕೊಡುತ್ತದೆ. ಹಾಗಾಗಿ ಪೌಲನು ಹಳೆ ಒಡಂಬಡಿಕೆ ಚರಿತ್ರೆಯನ್ನು ಇಂದಿನ ಕ್ರೈಸ್ತರು ವೈಯಕ್ತಿಕವಾಗಿ ಅನ್ವಯುವಾಗುವ ಆಧ್ಯಾತ್ಮಿಕ ಸತ್ಯಕ್ಕೆ ಉದಾಹರಣೆಯಾಗಿ ಉಪಯೋಗಿಸಿದ್ದಾನೆ. ಮತ್ತೆ ಇಸ್ರಾಯೇಲ್ಯರಿಗೆ ಅರಣ್ಯದಲ್ಲಿ ಆದ ಅನುಭವದ ಬಗ್ಗೆ ಆಲೋಚಿಸಿರಿ ಯಾವ ಪಾಠಗಳನ್ನು ಅದರ ನಿದರ್ಶನದಿಂದ ನಾವು ಕಲಿಯಬಹುದಾಗಿದೆ?

**ಸೋಮವಾರ** **ಸೆಪ್ಟೆಂಬರ್ 6**

## ಸಂಸ್ಕಾರಗಳು ಮತ್ತು ಯಜ್ಞಗಳು

ಹಳೆ ಒಡಂಬಡಿಕೆಯಲ್ಲಿ ಯಾಜಕಕಾಂಡದಲ್ಲಿರುವ ಸಂಸ್ಕಾರಗಳು ಮತ್ತು ಯಜ್ಞಗಳು ನೆನ್ನೆ ಕಲಿತುದಕ್ಕೆ ಹೆಚ್ಚು ನಿದರ್ಶನಗಳನ್ನು ಕೊಡುತ್ತದೆ. ಹಳೆ ಒಡಂಬಡಿಕೆಯ ಸಂಕೇತಗಳು ಹೊಸ ಒಡಂಬಡಿಕೆಯ ಸತ್ಯವನ್ನು ಸೂಚಿಸುತ್ತದೆ. ಸತ್ಯವೇದವನ್ನು ಓದುವ ಈಗಿನ ಜನರು ಈ ಸಂಸ್ಕಾರಗಳನ್ನು ಬಿಟ್ಟು ಓದುತ್ತಾರೆ. ಈ ಸಂಸ್ಕಾರಗಳು ಆಧ್ಯಾತ್ಮಿಕ ಸತ್ಯಗಳನ್ನು ಒಳಗೊಂಡಿವೆ. ಇವುಗಳನ್ನು ಅಧ್ಯಯನ ಮಾಡುವುದು ಮಹತ್ವದ ಬೆಲೆಯುಳ್ಳದ್ದಾಗಿದೆ.

ಯಾಜಕಕಾಂಡ 4:32–35 ವಚನಗಳಲ್ಲಿ ದೋಷಪರಿಹಾರಕ ಯಜ್ಞಕ್ಕೆ ಕೊಟ್ಟಿರುವ ಸೂಚನೆಗಳನ್ನು ಓದಿರಿ. ಇಂದು ನಮ್ಮ ಮಧ್ಯದಲ್ಲಿ ದೇವಾಲಯ ಇಲ್ಲದಿರಬಹುದು. ನಮ್ಮ ಪಾಪಗಳಿಗೆ ಯಜ್ಞವೇದಿಯ ಮೇಲೆ ಯಜ್ಞವನ್ನು ಸಮರ್ಪಿಸದಿರಬಹುದು. ಆದಾಗ್ಯೂ ಸಂಸ್ಕಾರಗಳಿಂದ ನಾವು ಏನನ್ನು ಕಲಿಯಬಹುದು? ಈ ಸಂಸ್ಕಾರವನ್ನು ಯೋಹಾನ 1:29 ಮತ್ತು 1 ಪೇತ್ರ 1:18–21 ಜೊತೆ ಸಂಬಂಧಿಸರಿ?

ಒಂದು ಸಂಸ್ಕಾರವು ಮುಖ್ಯವಾದ ಮೌಲ್ಯಗಳನ್ನು ಮತ್ತು ಮಾಹಿತಿಯನ್ನು ಹೊಂದಿರುವ ಉತ್ಕೃಷ್ಟವಾದ ಸಂವಾದಿ ಸಂದರ್ಭಕ್ಕನುಸಾರವಾಗಿ ನಾವು ಅರ್ಥ ಮಾಡಿಕೊಳ್ಳಬೇಕು. ಇದು ಫಲಕಾರಿಯಾಗಲು ಒಂದು ನಿರ್ದಿಷ್ಟವಾದ ಸಮಯದಲ್ಲಿ, ಒಂದು ನಿಗದಿತ ಸ್ಥಳದಲ್ಲಿ, ಪೂರ್ವನಿರ್ಧಾರಿತ ಪರಿಣಾಮಕಾರಿಯಾದ ಅನುಕ್ರಮವಾದ ಚಟುವಟಿಕೆಗಳು ಅಗತ್ಯವಾಗಿವೆ. ನಾವು ಹಳೆ ಒಡಂಬಡಿಕೆಯಲ್ಲಿ ಯಜ್ಞಗಳ ವಿಷಯದಲ್ಲಿ ಅನೇಕ ನಿಷೇಧಗಳನ್ನು ಹಾಕಿರುವುದನ್ನು ಓದುತ್ತೇವೆ. ಯಾವುದನ್ನು ಎಲ್ಲಿ ಯಾವಾಗ ಯಾವ ಕ್ರಮದಲ್ಲಿ ಯಜ್ಞಗಳನ್ನು ಅರ್ಪಿಸಬೇಕು ಎಂಬುದರ ಬಗ್ಗೆ ದೇವರು ನಿರ್ದಿಷ್ಟವಾದ ವಿವರಣೆಗಳನ್ನು ಕೊಟ್ಟಿದ್ದಾನೆ.

ಅನೇಕ ಸಂಸ್ಕಾರಗಳಲ್ಲಿ ಅವಶ್ಯವಾಗಿ ಪ್ರಧಾನವಾದ ಒಂದು ಸಂಸ್ಕಾರ ರಕ್ತವನ್ನು ಹರಿಸುವುದು, ರಕ್ತವನ್ನು ಪ್ರೋಕ್ಷಿಸುವುದು. ಈ ಸಂಸ್ಕಾರಗಳು ನೋಡುವುದಕ್ಕೆ ಚೆನ್ನಾಗಿರುವುದಿಲ್ಲ. ಹಾಗೆ ಚೆನ್ನಾಗಿರಲೂ ಬಾರದು. ಯಾಕೆಂದರೆ ಪ್ರಪಂಚದಲ್ಲಿ ಬಹಳ ಕುರೂಪದ ವಿಷಯದಲ್ಲಿ ವ್ಯವಹರಿಸುವುದೇ ಆಗಿದೆ. ಅಷ್ಟು ಕುರೂಪವುಳ್ಳದ್ದು ಪಾಪವೇ ಆಗಿದೆ.

ಯಾಗದ ನಿಖರವಾದ ಪಾತ್ರವನ್ನು ರಕ್ತವು ನಿರ್ವಹಿಸುತ್ತದೆ ಮತ್ತು ರಕ್ತವನ್ನು ಯಜ್ಞವೇದಿಯ ಕೊಂಬುಗಳಿಗೆ ಹಾಕಿ ಹಚ್ಚಬೇಕು. ದೇವದರ್ಶನ ಗುಡಾರದಲ್ಲಿ ನಡೆಯುವ ಎಲ್ಲಾ ಸಂಸ್ಕಾರಗಳು ವಿಧಿಪೂರ್ವಕವಾಗಿ ನಡೆಯುತ್ತವೆ, ಆದುದರಿಂದ ಅವುಗಳ ಸವಿವರವು ಸಿಗುವುದಿಲ್ಲ. ಬಹುಶಃ ಜನರಿಗೆ ಅದರ ಅರ್ಥವು ಚೆನ್ನಾಗಿ ತಿಳಿದಿರುತ್ತದೆ. ಎಲ್ಲದರ ಬಳಿಕ ಹೇಳಬೇಕೆಂದರೆ ಇಸ್ರಾಯೇಲ್ ಜನರು ರಕ್ತದ ಮಹತ್ವವನ್ನು ತಿಳುಕೊಂಡಿದ್ದರು (ಯಾಜಕಕಾಂಡ 17:11). ಯಾಜಕಕಾಂಡ 4:32–35 ವಚನಗಳಲ್ಲಿ ತೆಗೆದುಕೊಂಡಿರುವ ಉದಾಹರಣೆಯು ಯಾಜಕಕಾಂಡ 4:35ನ್ನು ವಿವರಿಸುತ್ತದೆ. ಹಾಗಾಗಿ ಮಹಾಯಾಜಕನು ತನ್ನ ಪಾಪಕ್ಕೋಸ್ಕರ ದೋಷ ಪರಿಹಾರಕ ಯಜ್ಞವನ್ನು ಮಾಡಬೇಕಾಗುತ್ತಿತ್ತು. ಅವನಿಗೆ ಅದರಿಂದ ಕ್ಷಮಾಪಣೆ ಸಿಗುತ್ತಿತ್ತು. ಹಾಗಾಗಿ ರಕ್ತವು ಮಹಾದೋಷ, ಪರಿಹಾರಕ ಪ್ರಕ್ರಿಯೆಯಲ್ಲಿ ಪ್ರಧಾನವಾಗಿತ್ತು. ರಕ್ತದ ಮೂಲಕವೇ ನಮ್ಮ ಪರಿಶುದ್ಧವಾದ ದೇವರ ಜೊತೆ ಪಾಪಿಗಳಾದ ನಾವು ಸರಿಯಾಗುತ್ತೇವೆ. ನಾವು ಈ ಯಜ್ಞಗಳಲ್ಲಿ ಏನನ್ನು ನೋಡುತ್ತೇವೆಂದರೆ ಯೇಸುಕ್ರಿಸ್ತನ ಮರಣ ಮತ್ತು ಸೇವೆಯ ಮಾದರಿ ನಮೂನೆಗಳು. ದೈವತ್ವದ ಒಬ್ಬ ವ್ಯಕ್ತಿಯ ಜೀವವನ್ನೇ ಸ್ವತ್ಯಾಗ ಮಾಡಬೇಕಾದಷ್ಟು ಕೆಟ್ಟದ್ದು ಪಾಪವಾಗಿದೆ. ಇದಕ್ಕಾಗಿ ಸ್ವತಃ ಯೇಸುಕ್ರಿಸ್ತನೇ ಬಲಿಯಾಗಬೇಕಾಯ್ತು. ನಾವು ಎಂದಿಗೂ ಕೃಪೆಯ ಮೇಲೆ ಆತುಕೊಳ್ಳಬೇಕು; ನಮ್ಮ ಕ್ರಿಯೆಗಳ ಮೇಲಲ್ಲ ಎಂಬುದರ ಬಗ್ಗೆ ಇದು ನಮಗೆ ಏನನ್ನು ಬೋಧಿಸುತ್ತದೆ? ಎಲ್ಲದರ ಬಳಿಕ ನಮ್ಮನ್ನು ನಾವೇ ಕೇಳಿಕೊಳ್ಳಬೇಕಾದದ್ದು ಏನೆಂದರೆ ಕ್ರಿಸ್ತನು ನಮಗೋಸ್ಕರ ಈಗಾಗಲೇ ಮಾಡಿದುದಕ್ಕೆ ಏನನ್ನು ತಾನೇ ಸೇರಿಸಬಲ್ಲೆವು?

**ಮಂಗಳವಾರ** **ಸೆಪ್ಟೆಂಬರ್ 7**

## ವಿಶ್ರಾಂತಿಯ ಉದಾಹರಣೆ (ನಿದರ್ಶನ)

ನಾವು ಈಗಾಗಲೇ ನೋಡಿದ ಮಾದರಿಗಳು ಮತ್ತು ಸಂಕೇತಗಳು ಎಂಬ ಆಲೋಚನೆಯು ಸತ್ಯವೇದಾಧಾರಿತ ಪರಿಕಲ್ಪನೆಯಾದ ವಿಶ್ರಾಂತಿಗೂ ಅನ್ವಯವಾಗುತ್ತದೆ. ಇದನ್ನು ತಿಳಿದುಕೊಳ್ಳಲು ನಾವು ಹೊಸ ಒಡಂಬಡಿಕೆಯ ಇಬ್ರಿಯ ಪುಸ್ತಕವನ್ನು ನೋಡೋಣ.

ಇಬ್ರಿಯ 4:1–11 ವಚನಗಳನ್ನು ಓದಿರಿ. ಆತನ ವಿಶ್ರಾಂತಿಗೆ ನಾವು ಇನ್ನೂ

ಸೇರಬೇಕಾಗಿದೆ ಎಂಬುದು ಯಾವುದನ್ನು ಸೂಚಿಸುತ್ತದೆ? ಇಸ್ರಾಯೇಲ್ಯರು ಅಡವಿಯಲ್ಲಿ ಅಲೆದಾಡಿದ ಅನುಭವವು ದೇವರು ಕೊಡುವ ವಿಶ್ರಾಂತಿಗೆ ಪ್ರವೇಶ ಪಡೆವ ಆಲೋಚನೆಗೆ ಹೇಗೆ ಹೆಚ್ಚಿನ ಒಳನೋಟವನ್ನು ನೀಡುತ್ತದೆ?

ಕಷ್ಟ ಸಹಿಷ್ಣುತೆ ಮತ್ತು ನಂಬಿಗಸ್ತಿಕೆ ಇಲ್ಲಿ ಬಹಳ ಮುಖ್ಯವಾಗುತ್ತದೆ. ಇದು 7ನೇ ದಿನದ ಸಬ್ಬತ್ತಿನ ಬಗ್ಗೆ ಹೇಳುತ್ತಿದ್ದರೂ ಈ ವಚನಗಳು ಮುಖ್ಯವಾಗಿ ದೇವಜನರಿಗೆ ನಂಬಿಕೆಯಲ್ಲಿ ದೃಢವಾಗಿ ನಿಲ್ಲುವುದಕ್ಕೆ ಕೊಟ್ಟ ಕರೆಯಾಗಿದೆ, ಅಂದರೆ ಕ್ರಿಸ್ತನಿಗೆ ಅವನ ಸುವಾರ್ತೆಗೆ ನಂಬಿಗಸ್ತರಾಗಿ ಉಳಿಯುವುದಾಗಿದೆ.

ಈ ವಚನಗಳು ಓದುಗನಿಗೆ ದೇವರು ಹಿಂದೆ ತನ್ನ ಜನರನ್ನು ಹೇಗೆ ಗಂಭೀರವಾಗಿ (ಕಟ್ಟುನಿಟ್ಟಿನಿಂದ) ನಡೆಸಿದನು ಎಂಬ ಪಾಠಗಳನ್ನು ಕಲಿಯುವಂತೆ ಮಾಡುತ್ತದೆ, ಆವಾಗ ಯಾರು ಅದೇ ತೆರದಾದ ಅವಿಧೇಯತೆಯಿಂದ ಬಿದ್ದು ಹೋಗುವುದಿಲ್ಲ (ಇಬ್ರಿ 4:11). ಇದೋ ಗಮನಹರಿಸಿರಿ, ಇದು ನಿಮಗೆ ಒಂದು ಅವಕಾಶವಾಗಿದೆ! ಇಸ್ರಾಯೇಲ್ಯರು ಸುವಾರ್ತೆ ಕೇಳಿದರು, ಆದರೆ ಅದರಿಂದ ಅವರು ಯಾವ ಪ್ರಯೋಜನವನ್ನು ಪಡೆದುಕೊಳ್ಳಲಿಲ್ಲವೆಂದು ವಚನವು ತಿಳಿಸುತ್ತದೆ.

ಅವರು ತಮ್ಮ ನಂಬಿಕೆಯನ್ನು ವಿಶ್ವಾಸದಿಂದ ಮತ್ತು ವಿಧೇಯತೆಯಿಂದ ಬಲಪಡಿಸಿಕೊಳ್ಳುವ ಬದಲು ದೇವರಿಗೆ ವಿರುದ್ಧವಾಗಿ ಬಂಡೆದ್ದರು (ಇಬ್ರಿಯ 3:7–15 ವಚನಗಳ ಜೊತೆ ಹೋಲಿಸಿರಿ). ಹಾಗಾಗಿ ಅವರು ದೇವರು ಕೊಡುವ ವಿಶ್ರಾಂತಿಯನ್ನು ಅನುಭವಿಸಲಿಲ್ಲ.

ಇಬ್ರಿಯ 4:3ನೇ ವಚನ ನಂಬಿಕೆಗೂ ವಿಶ್ರಾಂತಿಗೂ ಇರುವ ಸಂಬಂಧವನ್ನು ಹೇಳುತ್ತದೆ. ಯಾವನು ನಮಗೆ ವಿಶ್ರಾಂತಿಯನ್ನು ವಾಗ್ದಾನ ಮಾಡಿರುವನೋ ಮತ್ತು ಈ ವಾಗ್ದಾನದ ಮೇರೆಗೆ ನಮ್ಮನ್ನು ಬಿಡಿಸಬಲ್ಲನೋ ಅವನನ್ನು ಭರವಸೆಯಿಂದ ನಂಬಿದರೆ ಅವನ ವಿಶ್ರಾಂತಿಯಲ್ಲಿ ನಾವು ಸೇರಬಹುದು, ಆತನು ಖಂಡಿತವಾಗಿ ಯೇಸುಕ್ರಿಸ್ತನೆ. ಪುನಃ ಇಬ್ರಿಯ 4:3ನ್ನು ಓದಿರಿ. ಜನರ ಮುಖ್ಯಸಮಸ್ಯೆ ಏನಾಗಿತ್ತೆಂದು ಈ ವಚನವು ತಿಳಿಸುತ್ತದೆ? ಇದರಿಂದ ಅವರಂತೆ ನಮಗೂ ಸುವಾರ್ತೆ ಸಾರಲ್ಪಟ್ಟಿರುವುದರಿಂದ ಯಾವ ಪಾಠವನ್ನು ನಾವು ಕಲಿಯಬಹುದು (ಇಬ್ರಿಯ 4:2)?

ಆದಿಕ್ರೈಸ್ತರು ಸಮುದಾಯವು ದೇವರ ಮೊದಲ ಪ್ರಕಟನೆಯನ್ನು ಅಂಗೀಕರಿಸಿಕೊಂಡರು (ನಾವು ಹೇಳುವ ಹಳೆಯ ಒಡಂಬಡಿಕೆ) ಮತ್ತು ಯೇಸುಕ್ರಿಸ್ತನನ್ನು ದೇವರು ಯಜ್ಞಕ್ಕೆ ನೇಮಿಸಿದ ಕುರಿಮರಿಯೆಂತಲೂ ಆತನೇ ತಮ್ಮ ಪಾಪಗಳಿಗೆ ಬಲಿಯಾದನೆಂತಲೂ ನಂಬಿದರು. ಆತನ ಬಲಿಯಲ್ಲಿ ನಂಬಿಕೆ ಇಟ್ಟಾಗ ಅವರು ಕ್ರಿಸ್ತನಲ್ಲಿ ಕೊಡಲ್ಪಟ್ಟ ರಕ್ಷಣೆಯನ್ನು ವಿಶ್ರಾಂತಿಯನ್ನೂ ಅನುಭವಿಸಿದರು.

ಯೇಸುಕ್ರಿಸ್ತನ ರಕ್ತದಿಂದ ನಾವು ರಕ್ಷಿಸಲ್ಪಟ್ಟಿದ್ದೇವೆ ಅಂದರೆ ನಾವು ಕೃಪೆಯಿಂದ ರಕ್ಷಿಸಲ್ಪಟ್ಟಿದ್ದೇವೆ ಹೊರತು ಕ್ರಿಯೆಗಳಿಂದಲ್ಲ ಎಂಬ ತಿಳುವಳಿಕೆಯು ನಾವು ಕ್ರಿಸ್ತನಲ್ಲಿ ಸಿಗುವ ವಿಶ್ರಾಂತಿಗೆ ಪ್ರವೇಶ ಮಾಡಲು ಹೇಗೆ ಸಹಾಯ ಮಾಡುತ್ತದೆ.

**ಬುಧವಾರ** **ಸೆಪ್ಟೆಂಬರ್ 8**

## ನಿಮ್ಮ ಹೃದಯಗಳನ್ನು ನೀವು ಕಠಿಣಮಾಡಿಕೊಳ್ಳಬೇಡಿರಿ

ಇಬ್ರಿಯ 4:4–7 ಮತ್ತು ಕೀರ್ತ 95:8–11ನ್ನು ಓದಿರಿ. ಇಬ್ರಿಯ ಮತ್ತು ಕೀರ್ತನೆ ಇವೆರಡು ಅಧ್ಯಾಯಗಳ ವಚನಗಳಲ್ಲಿ ಯಾವ ಎಚ್ಚರಿಕೆ ಕೊಡಲಾಗಿದೆ ಮತ್ತು ಇಂದು ನಮಗೆ ಇವು ಏನು ಹೇಳುತ್ತವೆ?

ಇಬ್ರಿಯ 4:4–7 ವಚನಗಳು ಸೃಷ್ಟಿಯ ವಿವರಣೆ ಮತ್ತು ಕೀರ್ತನೆ 95:11ನೇ ವಚನಗಳು ಇಸ್ರಾಯೇಲ್ಯರ ಅವಿಧೇಯತೆಯ ಬಗ್ಗೆ ಮಾತಾಡುವ ಸಂದರ್ಭವಾಗಿದೆ. ಇಸ್ರಾಯೇಲ್ಯರು ದೇವರ ವಿಶ್ರಾಂತಿಯಲ್ಲಿ ಸೇರಲಾರದೆ ಹೋದದ್ದನ್ನು ಹೇಳುತ್ತದೆ. ಹೌದು, ಕೀರ್ತನೆ 95:8–11ನೇ ವಚನಗಳು ಇಸ್ರಾಯೇಲ್ಯರಿಗೆ ಅಡವಿಯಲ್ಲಿ ದೇವರ ವಿಶ್ರಾಂತಿಯ ಅನುಭವದ ಜೊತೆಗೆ ಬೆಸೆಯುತ್ತದೆ ಮತ್ತು ನಂಬದೆ ಹೋದ ಇಸ್ರಾಯೇಲ್ಯರು ಆತನ ವಿಶ್ರಾಂತಿಯಲ್ಲಿ ಸೇರುವುದಿಲ್ಲ ಎಂದು ದೇವರ ಪ್ರಮಾಣ ಮಾಡಿದುದು ಅಸಲಿಗೆ ವಾಗ್ದಾನದ ದೇಶಕ್ಕೆ ಸೇರಲಾರದೆ ಹೋದರು ಎಂಬುದನ್ನು ಹೇಳುತ್ತದೆ. ಖಂಡಿತವಾಗಿ ಇಸ್ರಾಯೇಲ್ಯರು ವಾಗ್ದಾನದ ದೇಶವನ್ನು ಪ್ರವೇಶಿಸಿದರು. ಇಸ್ರಾಯೇಲ್ಯರ ಮುಂದಿನ ಸಂತತಿಯು (ಹೊಸ ಸಂತತಿ) ವಾಗ್ದಾನ ದೇಶದ ಗಡಿಯನ್ನು ದಾಟಿದರು. ದೇವರ ಸಹಾಯದಿಂದ ಪಟ್ಟಣವನ್ನು ವಶಪಡಿಸಿಕೊಂಡು ವಾಸಮಾಡಿದರು. ಅವರು ದೇವರ ವಿಶ್ರಾಂತಿಯಲ್ಲಿ ಸೇರಲಿಲ್ಲ ಎಂಬುದು ಅವರು ವಾಸ್ತವವಾಗಿ ಯೇಸುಕ್ರಿಸ್ತನ ರಕ್ಷಣೆಯನ್ನು ಅನುಭವಿಸಲಿಲ್ಲ ಎಂದು ಅರ್ಥ.

ಯಾಕೆಂದರೆ ಅಪನಂಬಿಕೆಯು ಸ್ಪಷ್ಟವಾದ ಅವಿಧೇಯತೆಯಲ್ಲಿ ವ್ಯಕ್ತವಾಯ್ತು. ವಿಶ್ರಾಂತಿ ಎಂಬುವುದು ಅವರು ಸೇರಬೇಕಾದ ದೇಶಕ್ಕೆ ಸಂಬಂಧಪಟ್ಟಾಗ್ಯೂ ಜನರು ಜೀವಿಸುವ ಸ್ಥಳಕ್ಕಿಂತ ಮಿಗಿಲಾದದ್ದನ್ನು ಒಳಗೊಂಡಿದೆ.

ಇಬ್ರಿಯ 4:6 ಏನನ್ನು ಸೂಚಿಸುತ್ತದೆ ಅಂದರೆ ನಿಜವಾದ ವಿಶ್ರಾಂತಿಯ ದೈವಿಕ ವಾಗ್ದಾನವನ್ನು ಯಾರ್ಯಾರು ಕೇಳಿಸಿಕೊಂಡರೋ ಅವರ್ಯಾರು ತಮ್ಮ ಅವಿಧೇಯತ್ವದ ದೆಸೆಯಿಂದ ವಿಶ್ರಾಂತಿಗೆ ಸೇರಲಾರದೆ ಹೋದರು. ಅವಿಧೇಯತ್ವಕ್ಕೂ ಮತ್ತು ದೇವರ ವಿಶ್ರಾಂತಿಯಲ್ಲಿ ಸೇರದೆ ಹೋದದ್ದಕ್ಕೂ ಏನು ಸಂಬಂಧ?

ಇಂದೇ ಎಂಬುದು ಅವಸರವನ್ನು ವ್ಯಕ್ತಪಡಿಸುತ್ತದೆ. ಇಂದೇ (ಈ ಹೊತ್ತು) ಎಂಬುದು ಕಾಲಹರಣ ಮಾಡುವುದಕ್ಕೆ ಸಮಯವೇ ಇಲ್ಲ ಎಂದು ಅರ್ಥಕೊಡುತ್ತದೆ. ಇಂದು ತಕ್ಷಣದ ಪ್ರತಿಕ್ರಿಯೆಯನ್ನು ಮತ್ತು ತೀರ್ಮಾನವನ್ನು ಕೇಳುತ್ತದೆ. ಪೌಲನು ಸೆಮೆರಾನ್ ಎಂಬ ಪದವನ್ನು ಇಂದೇ ಎಂಬ ಪದಕ್ಕೆ ಸಂವಾದಿಯಾಗಿ ಪೌಲನು ಬಳಸಿದ್ದಾನೆ. ಇದು ವಿಶ್ರಾಂತಿಯ ಸಂಬಂಧವಾಗಿ ಬಹಳ ಮುಖ್ಯವಾಗಿದೆ. ಕೀರ್ತನೆಗಳು 95:7,8 ವಚನಗಳು ದೇವಜನರು ಅವರ ಪೂರ್ವಿಕರು ಮಾಡಿದ ತಪ್ಪುಗಳನ್ನು ಮಾಡಬಾರದು ಎಂಬ ಎಚ್ಚರಿಕೆ ಮತ್ತು ಒಂದು ಮನವಿಯಾಗಿದೆ. ಇಸ್ರಾಯೇಲ್ಯರು ದೇವರ ರಕ್ಷಣೆಯಿಂದ ಸಿಗುವ ನಿಜವಾದ ವಿಶ್ರಾಂತಿಯಲ್ಲಿ ಸೇರುವುದಕ್ಕೆ ವಿಫಲರಾದರು. ಇವತ್ತು ನೀವು ದೇವರ ಸ್ವರಕ್ಕೆ ಕಿವಿಗೊಟ್ಟರೆ ನಿಮ್ಮ ಹೃದಯವನ್ನು ಕಠಿಣ ಮಾಡಿಕೊಳ್ಳಬೇಡಿರಿ ಎಂಬ ವಾಕ್ಯವನ್ನು ನಾವು ಕೇಳಿಸಿಕೊಂಡಾಗ ಇದು ಯಾವ ಅರ್ಥವನ್ನು ಕೊಡುತ್ತದೆ? ಇಂದೇ (ಈ ಹೊತ್ತೇ) ಎಂಬ ಪದವು ಯಾಕೆ ಬಹಳ ಮುಖ್ಯವಾಗುತ್ತದೆ? ಎಲ್ಲದರ ಬಳಿಕ ಹೇಳಬೇಕಾದದ್ದೇನೆಂದರೆ, ಕೀರ್ತನೆಗಳು ಸಾವಿರ ವರ್ಷಗಳ ಹಿಂದೆ ಉಪಯೋಗಿಸಲ್ಪಟ್ಟಿದೆ. ಆದಾಗ್ಯೂ ಈ ಹೊತ್ತೇ ಎಂಬುದು ಎಷ್ಟು ನಮಗೆ ಮುಖ್ಯವಾಗಿದೆ?

**ಗುರುವಾರ** **ಸೆಪ್ಟೆಂಬರ್ 9**

## ಪರಲೋಕ ಪಟ್ಟಣವನ್ನು ಗೆಲ್ಲುವುದು

ಇಬ್ರಿಯ 4ನೇ ಅಧ್ಯಾಯದಲ್ಲಿರುವ ತರ್ಕದ ಮುಖ್ಯ ಆಲೋಚನೆ ನಿರ್ದಿಷ್ಟವಾಗಿ ವ್ಯಕ್ತವಾಗುವುದು ಇಬ್ರಿಯ 4:8–11 ವಚನಗಳನ್ನು ಓದಿದಾಗ. ಯೆಹೋಶವನು ಇಸ್ರಾಯೇಲ್ಯರಿಗೆ ವಿಶ್ರಾಂತಿಯನ್ನು ಕೊಡಲಿಲ್ಲ. ದೇವರು ಸುಳ್ಳುಗಾರನಲ್ಲದ ಪ್ರಯುಕ್ತ

ಮತ್ತೊಂದು ವಿಶ್ರಾಂತಿ ದೇವಜನರಿಗೆ ಉಳಿದಿರಬೇಕು. ಈ ದೇವಜನರು ಗುಂಪು ಪ್ರತ್ಯೇಕವಾಗಿ ಯೆಹೂದ್ಯ ವಿಶ್ವಾಸಿಗಳಿಂದ ಕೂಡಿರುವುದಿಲ್ಲ. ಈ ಗುಂಪು ಯೇಸುಕ್ರಿಸ್ತನನ್ನು ತಮ್ಮ ಸ್ವಂತ ರಕ್ಷಕನನ್ನಾಗಿ ಅಂಗೀಕರಿಸಿದವರನ್ನು ಸಹಾ ಒಳಗೊಂಡಿರುತ್ತದೆ.

ಗಲಾತ್ಯ 3:26–29 ಓದಿರಿ. ಇಲ್ಲಿ ಶಿಲುಬೆಯ ನಂತರದ ಒಡಂಬಡಿಕೆಯ ಜನರ ಗುಣಲಕ್ಷಣಗಳನ್ನು ಗಮನಿಸಿರಿ. ನೀವೆಲ್ಲರೂ "ಕ್ರಿಸ್ತಯೇಸುವಿನಲ್ಲಿ ಒಂದೇ ಆಗಿರುವುದರಿಂದ ಯಹೂದ್ಯನು ಗ್ರೀಕನು ಎಂದೂ, ಆಳು ಒಡೆಯ ಎಂದೂ, ಗಂಡು ಹೆಣ್ಣು ಎಂಬ ಭೇದವಿಲ್ಲ" ಎಂದು ಪೌಲನು ಈ ಸಂದರ್ಭದಲ್ಲಿ ಹೇಳುವುದರ ಅರ್ಥವೇನು?

ಇಬ್ರಿಯ 4ನೇ ಅಧ್ಯಾಯವನ್ನು 7ನೇ ದಿನದ ಸಬ್ಬತ್ತು ಆಚರಣೆಗೆ ಒತ್ತುಕೊಡುವುದಕ್ಕೆ ಉಪಯೋಗಿಸಿದ ಸಂದರ್ಭಗಳಿವೆ. ಹಾಗೆಯೇ ಈ ವಚನಗಳಲ್ಲಿ ಮತ್ತೊಂದು ವಿಶ್ರಾಂತಿಯ ಬಗ್ಗೆ (ಅಂತ್ಯಕಾಲದ ವಿಶ್ರಾಂತಿ) ಪ್ರಸ್ತಾಪವಿದೆ, ಈ ಸಂಗತಿಯನ್ನು ಪರಿಶೀಲಿಸಿದ ನಂತರ ಇದನ್ನೇ ಕೆಲವರು ವಿಶ್ರಾಂತಿಯ (ಸಬ್ಬತ್ತಿನ) ಸಿಂಧುತ್ವವನ್ನು ಪ್ರಶ್ನಿಸುವುದಕ್ಕೆ ಉಪಯೋಗಿಸುತ್ತಾರೆ. ಈ ಎರಡೂ ಅಭಿಪ್ರಾಯಗಳು ವಚನವನ್ನು ಸರಿಯಾಗಿ ಪ್ರತಿಬಿಂಬಿಸುವುದಿಲ್ಲ. ಈ ವಚನವು ಅಂತ್ಯಕಾಲದ ವಿಶೇಷವಾದ ದೇವರ ವಿಶ್ರಾಂತಿಯನ್ನು ಸೂಚಿಸುತ್ತದೆ, ನಾವು ಸೃಷ್ಟಿಯಾದಾ–ಗಲಿಂದಲೂ ಕೈಗೊಂಡು ನಡೆಯುವ ಸಬ್ಬತ್ತು ನಮಗೆ ಶಾಶ್ವತ ವಿಶ್ರಾಂತಿಯನ್ನು ನೀಡುವುದಿಲ್ಲ ಬದಲಿಗೆ ಒಂದು ಸಣ್ಣ ವಿಶ್ರಾಂತಿಯನ್ನು ಕೊಡುತ್ತದೆ, ಪ್ರತೀವಾರವು ಅಂತ್ಯಕಾಲದ ವಿಶ್ರಾಂತಿಯ ಅನುಭವವನ್ನು ಸವಿಯುವಂತೆ ಮಾಡುತ್ತದೆ. ಯೆಹೂದ್ಯರು ಸಬ್ಬತ್ತನ್ನು ನಿಜವಾಗಿ ಬರಬೇಕಾದ ಮುಂದಿನ ಲೋಕದ ಒಂದು ಸಣ್ಣ ಪೂರ್ವಸೂಚಕದಂತೆ ಅರ್ಥಮಾಡಿಕೊಂಡಿದ್ದಾರೆ. ಇವರು ಮುಂದೆ ಬರಲಿರುವ ಲೋಕವನ್ನು ಓಲಮ್‌ಹಾಬ ಎಂದು ಕರೆಯುತ್ತಾರೆ.

ಸಬ್ಬತ್ತಿನಂತಹ ವಿಶ್ರಾಂತಿಯು ದೇವಜನರಿಗೆ ಇನ್ನೂ ಸಹ ಕೈಗೊಳ್ಳಲು ಉಳಿದಿದೆ ಎಂಬುದು ಭೂಲೋಕದ ಚರಿತ್ರೆಯಲ್ಲಿ ದೇವರು ಹೊಂದಿಕೊಂಡ ಪ್ರಥಮ ವಿಶ್ರಾಂತಿಯನ್ನು ನೆನಪಿಸುತ್ತದೆ, ಅವನು ನಾವು ಕೂಡ ನಮ್ಮ ಕೆಲಸಗಳನ್ನು

ನಿಲ್ಲಿಸಿ, ಆತನು ನಮಗೆ ವಾಗ್ದಾನ ಮಾಡಿದ ರಕ್ಷಣೆಯನ್ನು ನೆರವೇರಿಸುತ್ತಾನೆಂದು ಭರವಸೆ ಇಡಬೇಕೆಂದು ಅರ್ಥ ಕೊಡುತ್ತದೆ.

ಕೆಲವು ವ್ಯಾಖ್ಯಾನುಕಾರರು ಮಾಡುವ ವಾದಕ್ಕೆ ವ್ಯತಿರಿಕ್ತವಾದುದೇನೆಂದರೆ, ಸಬ್ಬತ್ತಿನ ಆಜ್ಞೆಯು ಯೇಸುಕ್ರಿಸ್ತನಲ್ಲಿ ಸಿಗುವ ರಕ್ಷಣೆಯಿಂದ ನೆರವೇರಲ್ಪಟ್ಟಿದೆ ಆದುದರಿಂದ ಸಬ್ಬತ್ತನ್ನು ಕೈಗೊಳ್ಳುವ ಅಗತ್ಯವಿಲ್ಲ ಎಂಬುದನ್ನು ಸಂದರ್ಭವು ಬೆಂಬಲಿಸುವುದಿಲ್ಲ. ನಮಗೆ ವಾಗ್ದಾನ ಮಾಡಲ್ಪಟ್ಟಿರುವ ವಿಶ್ರಾಂತಿಯನ್ನು ಯೇಸುಕ್ರಿಸ್ತನು ನಮಗಾಗಿ ಏನು ಮಾಡಿದ್ದಾನೋ ಅದು ಎಂದೆಂದಿಗೂ ಸತ್ಯವೇದಾಧಾರಿತ ಏಳನೇ ದಿನದ ಸಬ್ಬತ್ತನ್ನು ಬದಲಾಯಿಸುವುದಿಲ್ಲ, ಆದರೆ ಸಬ್ಬತ್ತಿನ ಅವಶ್ಯಕತೆಯನ್ನು ಹೆಚ್ಚಿಸುತ್ತದೆ.

ಸ್ವಯಂನಿರ್ಮಿತ ಜನರನ್ನು ಬಹಳವಾಗಿ ಗೌರವಿಸುವ ಈ ಲೋಕದಲ್ಲಿ ಕಠಿಣ ಪರಿಶ್ರಮಿಗಳು, ಕಾರ್ಯಸಾಧಕರು ಯೇಸುಕ್ರಿಸ್ತನಲ್ಲಿ ವಿಶ್ರಾಂತಿ ಹೊಂದಿಕೊಂಡು ಆತನ ಕೃಪೆಯಲ್ಲಿ ಭರವಸವಿಟ್ಟರೆ ಸಾಕು ನಮಗೆ ರಕ್ಷಣೆಯಾಗುತ್ತದೆ ಮತ್ತು ನಾವು ಮಾರ್ಪಡುತ್ತೇವೆ ಎಂಬುದು ಸಾಂಸ್ಕೃತಿಕ ವಿರೋಧವಾದ ಮಾತಾಗಿದೆ.

ನಮ್ಮ ಪಾಪಗಳು ಬಹಳ ಘೋರವಾದವುಗಳು, ನಮ್ಮ ಹೃದಯಗಳು ಮಾರ್ಪಡುವುದಿಲ್ಲ, ನಮ್ಮ ಸ್ಥಿತಿ ನಿಜವಾಗಿಯೂ ಶೋಚನೀಯ ಎಂದು ಆಲೋಚಿಸುವ ಜನರಿಗೆ ಯೇಸುಕ್ರಿಸ್ತನಲ್ಲಿ ವಿಶ್ರಾಂತಿ ಹೊಂದಲು ನೀವು ಹೇಗೆ ಸಹಾಯ ಮಾಡುವಿರಿ? ಸತ್ಯವೇದದ ಯಾವ ವಚನಗಳನ್ನು ಅವರೊಂದಿಗೆ ಹಂಚಿಕೊಳ್ಳುವಿರಿ?

**ಶುಕ್ರವಾರ** **ಸೆಪ್ಟೆಂಬರ್ 10**

**ಹೆಚ್ಚಿನ ಚಿಂತನೆ :** "ನಾವು ಯಾವಾಗಲೂ ನಮ್ಮ ಶೋಧನೆ ಸಮಸ್ಯೆಗಳ ಸಹಿತವಾಗಿ ಯೇಸುಕ್ರಿಸ್ತನ ಹತ್ತಿರ ಬರುವುದಕ್ಕೆ ಹಿಂಜರಿಯುತ್ತೇವೆ. ಕೆಲವು ಸಂದರ್ಭಗಳಲ್ಲಿ ನಮ್ಮ ಸಮಸ್ಯೆಗಳನ್ನು ಇತರರೊಂದಿಗೆ ಹೇಳಿಕೊಳ್ಳುತ್ತೇವೆ ನಮ್ಮ ಬಾಧೆಗಳನ್ನು ತೆಗೆದು ಹಾಕಲಾಗದವರೊಂದಿಗೆ ತಿಳಿಸುತ್ತೇವೆ. ಎಲ್ಲವನ್ನೂ ಯೇಸುಕ್ರಿಸ್ತನ ಜೊತೆ ಹಂಚಿಕೊಳ್ಳುವುದನ್ನು ತಾತ್ಸಾರ ಮಾಡುತ್ತೇವೆ. ಆತನು ತಾನೇ ನಮ್ಮ ದುಃಖದ ಮಾರ್ಗಗಳನ್ನು ಸಂತೋಷದ ಮತ್ತು ಸಮಾಧಾನ ಮಾರ್ಗಗಳನ್ನಾಗಿ ಮಾಡುತ್ತಾನೆ. ಸ್ವನಿರಾಕರಣೆ ಮತ್ತು ಸ್ವತ್ಯಾಗಗಳು ಶಿಲುಬೆಯಲ್ಲಿ

ಪಡೆದ ವಿಜಯಕ್ಕೆ ಮಹಿಮೆಯನ್ನು ನೀಡುತ್ತವೆ. ದೇವರ ವಾಗ್ದಾನಗಳು ಬಹಳ ಅಮೂಲ್ಯವಾದುವು. ನಾವು ಆತನ ಚಿತ್ತವನ್ನು ಅರಿತುಕೊಳ್ಳಲು ಆತನ ವಾಕ್ಯವನ್ನು ಅಧ್ಯಯನ ಮಾಡಬೇಕು. ನಾವು ಪವಿತ್ರಾತ್ಮ ಪ್ರೇರಿತ ವಾಕ್ಯಗಳನ್ನು ಎಚ್ಚರಿಕೆಯಿಂದ ಅಧ್ಯಯನ ಮಾಡಬೇಕು, ನಿಜಜೀವನದಲ್ಲಿ ವಿಧೇಯರಾಗಿ ನಡೆದುಕೊಂಡರೆ ನಮ್ಮ ಕಾಲುಗಳು ಸಮತಟ್ಟಾದ ಮಾರ್ಗಗಳಲ್ಲಿ ನಡೆಸಲ್ಪಡುತ್ತವೆ, ಆವಾಗ ನಾವು ನಡೆವಾಗ ಎಂದಿಗೂ ಎಡಹುವುದಿಲ್ಲ. ಓ, ಅಗೋ, ಎಲ್ಲಾ ಸೇವಕರು, ಜನರು ತಮ್ಮ ಬಾಧೆಗಳನ್ನು, ತೊಡಕುಗಳನ್ನು ಯೇಸುವಿನ ಹತ್ತಿರ ತೆಗೆದುಕೊಂಡು ಹೋಗುತ್ತಾರೆ, ಆತನು ಅವರನ್ನು ಅಂಗೀಕರಿಸಿ– ಕೊಳ್ಳಲು ಕಾದುಕೊಂಡಿದ್ದಾನೆ, ಮತ್ತು ಅವರಿಗೆ ಸಮಾಧಾನವನ್ನೂ ವಿಶ್ರಾಂತಿಯನ್ನು ದಯಪಾಲಿಸುತ್ತಾನೆ: ಆತನಲ್ಲಿ ನಂಬಿಕೆಯಿಟ್ಟವರನ್ನು ಎಂದಿಗೂ ತಿರಸ್ಕರಿಸುವುದಿಲ್ಲ". ಶ್ರೀಮತಿ ಎಲೆನ್ ಜಿ ವೈಟಮ್ಮನವರ ದಿ ಸೈನ್ಸ್ ಆಫ್ ಟಮ್ಸ್ 17ನೇ ಮಾರ್ಚ್ 1887, ಪುಟ 161.

ಓ ಪ್ರಿಯ ಯೌವನಸ್ಥರೇ, ನೀವು ಯೇಸುಕರ್ತನು ನೀತಿ ನ್ಯಾಯಾಧಿಪತಿಯಾಗಿ ನಿಮ್ಮ ಹೆಸರನ್ನು ತಂದೆಯಾದ ದೇವರ ಮುಂದೆಯೂ ಪರಿಶುದ್ಧದೂತರ ಮುಂದೆಯೂ ನಿವೇದನೆ ಮಾಡುವ ಸಮಯವನ್ನು ನಿರೀಕ್ಷಿಸುತ್ತಾ ಸಂತೋಷದ ನಿರೀಕ್ಷೆಯಿಂದ ಮುಂದೆ ನೋಡಬಲ್ಲಿರಾ? ನೀವು ಯೇಸುಕ್ರಿಸ್ತನ ಎರಡನೇ ಬರೋಣಕ್ಕೆ ಚೆನ್ನಾಗಿ ಸಿದ್ಧವಾಗಬೇಕು ಎಂದರೆ ಆತನು ತನ್ನ ಮೊದಲನೇ ಬರೋಣದಲ್ಲಿ ನಮಗೆ ತಂದ ಮಹಾರಕ್ಷಣೆಯಲ್ಲಿ ದೃಢವಾದ ನಂಬಿಕೆಯಿಟ್ಟು ವಿಶ್ರಾಂತಿಯಲ್ಲಿ ನೆಲೆಗೊಂಡಿರಬೇಕು. ನೀವು ಯೇಸುಕ್ರಿಸ್ತನನ್ನು ಒಬ್ಬ ಸ್ವಂತ ರಕ್ಷಕನನೆಂದು ನಂಬಿಕೊಳ್ಳಬೇಕು".

ಶ್ರೀಮತಿ ಎಲೆನ್ ಜಿ ವೈಟಮ್ಮನವರ Our high calling 368ನೇ ಪುಟ.

## ಚರ್ಚಿಸಬೇಕಾದ ಪ್ರಶ್ನೆಗಳು

1. ದೇವರು ಪರಲೋಕದಲ್ಲಿ ನಮಗೆ ಕೊಡುವ ವಿಶ್ರಾಂತಿಯ ಮುಂಚಿತ್ರವನ್ನು ನೀಡುವ 7ನೇ ದಿನದ ಸಬ್ಬತ್ತಿನಲ್ಲಿ ಅಂಥಾ ವಿಶೇಷವಾದುದೇನಿದೆ? ಸಬ್ಬತ್ತಿನ ವಿಶ್ರಾಂತಿಯು ಶಾಶ್ವತತೆಯ ಅನುಭವವನ್ನು ಮುಂಚಿತವಾಗಿ ನೀಡುತ್ತದೆ ಹೇಗೆ?

2. ದೋಷಪರಿಹಾರವೆಂದರೆ ಮರು ಸುಧಾನ ಅಥವಾ ಮರುಸಮಾಧಾನವೆಂಬ ಅರ್ಥವನ್ನು ಕೊಡುತ್ತದೆ ಅಂದರೆ ದೇವರ ಬಳಿಗೆ ಹಿಂದಿರುಗುವುದು. ರೋಮಪುರದವರಿಗೆ ಬರೆದ ಪತ್ರಿಕೆ 5:11ರಲ್ಲಿರುವ ಮುಖ್ಯವಾದ ಹೇಳಿಕೆಯ ಬಗ್ಗೆ ಆಲೋಚಿಸಿರಿ: "ಇಷ್ಟು ಮಾತ್ರವಲ್ಲದೆ ನಾವು ನಮ್ಮ ಕರ್ತನಾದ ಯೇಸುಕ್ರಿಸ್ತನ ಮೂಲಕ ಸಮಾಧಾನ (ಮರುಸಂಧಾನ) ಹೊಂದಿದವರಾಗಿ ಆತನ ಮುಖಾಂತರ ದೇವರಲ್ಲಿ ಹರ್ಷಗೊಳ್ಳುತ್ತೇವೆ". ಯಾರಾದರೂ ನಿಮ್ಮನ್ನು ದೇವರೊಂದಿಗೆ ಸಮಾಧಾನ ಹೊಂದುವುದು (ಮರುಸಂಧಾನ) ಎಂದರೇನು ಮತ್ತು ಮರುಸಂಧಾನವು ನಿಮ್ಮ ಜೀವನದಲ್ಲಿ ಯಾವ ವ್ಯತ್ಯಾಸ ಉಂಟು ಮಾಡಿದೆ ಎಂದು ಕೇಳಿದರೆ ನಿಮ್ಮ ಉತ್ತರವೇನಾಗಿದೆ?

3. ನಮ್ಮ ಕ್ರೈಸ್ತೀಯ ಜೀವನದಲ್ಲಿ ಸಣ್ಣದನ್ನು ದೊಡ್ಡದು ಮಾಡಿಕೊಂಡು ಕಷ್ಟಪಡುವುದನ್ನು ಹೇಗೆ ತಪ್ಪಿಸಬಹುದು? ದೇವರವಾಕ್ಯವು ನಮಗೆ ಕೊಡುವ ದೊಡ್ಡ ಭರವಸೆಯ ಮೇಲೆ ನಾವು ಹೇಗೆ ಗಮನ ಹರಿಸಬಹುದು?

4. ಇಸ್ರಾಯೇಲ್ಯರು ಅಡವಿಯಲ್ಲಿ ಪ್ರದರ್ಶಿಸಿದ ಅಪನಂಬಿಕೆ ಮತ್ತು ಎಲ್ಲಾ ತಪ್ಪುಗಳ ಬಗ್ಗೆ ಆಲೋಚಿಸಿರಿ? ಅವರಿಗಿದ್ದ ಸವಾಲುಗಳು ನಮಗಿರುವಂಥವುಗಳಿಗಿಂತ ಭಿನ್ನವಾಗಿದ್ದರೂ (ನಾವು ಅರಣ್ಯ ಪ್ರದೇಶದಲ್ಲಿ ಅವರಂತೆ ಅಲದಾಡುತ್ತಿಲ್ಲ) ಯಾವ ಸತ್ಯಾಂಶಗಳು (ತತ್ವಗಳು) ಸಮಾನವಾಗಿದೆ? ಅವರಂತೆಯೇ ನಮ್ಮ ಕ್ರೈಸ್ತೀಯ ಜೀವನದಲ್ಲೂ ಅದೇ ತರದ ಸವಾಲುಗಳು ಎದುರಾಗಬಹುದು, ಅವರ ತಪ್ಪುಗಳಿಂದ ನಾವು ಯಾವ ಪಾಠಗಳನ್ನು ಕಲಿಯಬಹುದು?